# ● ಸುದ್ದಿ ಸಂಚಯ ●

❑ *The Cultural Heritage of India* ಇಂಗ್ಲಿಷಿನಲ್ಲಿರುವ ಈ ಗ್ರಂಥಮಾಲಿಕೆಯ ಏಳನೆಯ ಸಂಪುಟದ ಮೊದಲ ಭಾಗವನ್ನು ಭಾರತದ ಪ್ರಧಾನಮಂತ್ರಿಗಳಾದ ಡಾ. ಮನಮೋಹನ್ ಸಿಂಗ್ ಅವರು ದೆಹಲಿಯ ತಮ್ಮ ನಿವಾಸದಲ್ಲಿ ಬಿಡುಗಡೆ ಮಾಡಿದರು. ಈ ಗ್ರಂಥಗಳನ್ನು ಕೊಲ್ಕತಾದ ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರ್‌ನಿಂದ ಪ್ರಕಟಿಸಲಾಗಿದೆ. ಮೊದಲ ನಾಲ್ಕು ಸಂಪುಟಗಳನ್ನು ಮೈಸೂರು ವಿಶ್ವವಿದ್ಯಾನಿಲಯವು ಕನ್ನಡಕ್ಕೆ ಅನುವಾದಿಸಿ **'ಯುಗಯಾತ್ರೀ ಭಾರತೀಯ ಸಂಸ್ಕೃತಿ'** ಎಂದು ಪ್ರಕಟಿಸಿದೆ.

❑ ಹೈದರಾಬಾದಿನಲ್ಲಿರುವ ರಾಮಕೃಷ್ಣ ಮಠವು ತೆಲುಗು ಭಾಷೆಯಲ್ಲಿನ ರಾಮಕೃಷ್ಣ–ವಿವೇಕಾನಂದ–ವೇದಾಂತ ಸಾಹಿತ್ಯವನ್ನು ಪ್ರಕಟಿಸುವ ಜವಾಬ್ದಾರಿಯನ್ನು ಚೆನ್ನೈನಿಂದ ಪಡೆದುಕೊಂಡು, ಅದಕ್ಕಾಗಿ ಒಂದು **ಪ್ರಕಾಶನ ಭವನವನ್ನೇ** ನಿರ್ಮಿಸಿದೆ. ಈ ಭವನದ ಉದ್ಘಾಟನೆಯನ್ನು ಮಾರ್ಚ್ ೧೧ರಂದು ರಾಮಕೃಷ್ಣ ಮಹಾಸಂಘದ ಪ್ರಮುಖ ಕಾರ್ಯದರ್ಶಿಗಳಾದ ಪೂಜ್ಯ ಸ್ವಾಮಿ ಸ್ಮರಣಾನಂದಜಿ ನೆರವೇರಿಸಿದರು.



❑ ಆಂಧ್ರಪ್ರದೇಶದ ಕಡಪಾ ನಗರದ ಹೊರವಲಯದಲ್ಲಿ ಪ್ರಾರಂಭವಾಗಿರುವ ಕಡಪಾ ಮಿಷನ್ ಕೇಂದ್ರದ ಹೊಸ ಆವರಣದಲ್ಲಿ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜರು ದೇವಸ್ಥಾನವನ್ನು ಉದ್ಘಾಟಿಸಿದರು. **ಸ್ವಾಮಿ ಶಿವಾನಂದ ಸಾಧು ನಿವಾಸಂ** ಎಂಬ ಸಾಧುಗಳ ವಸತಿಗೃಹವನ್ನೂ ಉದ್ಘಾಟಿಸಿದರು. ಮೂರು ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಾವಿರಕ್ಕೂ ಹೆಚ್ಚು ಭಕ್ತರು ಭಾಗವಹಿಸಿದರು. **ಪತ್ರಿಕೆಯ ಮುಖಪುಟದಲ್ಲಿ ಚಿತ್ರಗಳನ್ನು ಕಾಣಬಹುದು.**

❑ ಮೇಘಾಲಯದ ಶಿಲ್ಲಾಂಗ್ ನಗರದಲ್ಲಿರುವ ರಾಮಕೃಷ್ಣ ಮಿಷನ್ ಕೇಂದ್ರವು ದೀರ್ಘಕಾಲದಿಂದ ಉಚಿತ ಚಿಕಿತ್ಸಾಲಯವನ್ನು ನಡೆಸಿಕೊಂಡು ಬಂದಿದೆ. ಈ ಚಿಕಿತ್ಸಾಲಯಕ್ಕಾಗಿ ನಿರ್ಮಿಸಿದ ಮೂರು ಅಂತಸ್ತಿನ ಒಂದು ಹೊಸ ಕಟ್ಟಡವನ್ನು ಮಾರ್ಚ್ ೧೭ರಂದು ಸಂಘದ ಪ್ರಮುಖ ಕಾರ್ಯದರ್ಶಿಗಳು ಉದ್ಘಾಟಿಸಿದರು.

❑ ಮೇಘಾಲಯದ ಚಿರಾಪುಂಜಿ ನಗರದಲ್ಲಿರುವ ರಾಮಕೃಷ್ಣ ಮಿಷನ್ ಕೇಂದ್ರವು ಬುಡಕಟ್ಟು ಸಂಸ್ಕೃತಿಯ ವಸ್ತು ಸಂಗ್ರಹಾಲಯವನ್ನು ಪ್ರಾರಂಭಿಸಿದೆ. ಅನೇಕ ಚಿತ್ರಗಳಿಂದ ಕೂಡಿ ಆಕರ್ಷಕವಾಗಿರುವ ಈ ಸಂಗ್ರಹಾಲಯವನ್ನು ಮಾರ್ಚ್ ೧೯ ರಂದು ಸಂಘದ ಪ್ರಮುಖ ಕಾರ್ಯದರ್ಶಿಗಳು ಉದ್ಘಾಟಿಸಿದರು.

❑ ಚಂಡೀಘರ್ ಕೇಂದ್ರದ ವಿದ್ಯಾರ್ಥಿನಿಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಅನುಪಮ್ ದೇವ್ ಗೋಯಾಲ್, National level Science Talent Search Examination (NSTSE) XIನೇ ತರಗತಿಯವರಿಗಾಗಿ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಪರೀಕ್ಷೆಯಲ್ಲಿ ಐದನೇ ಸ್ಥಾನವನ್ನು ಪಡೆದಿದ್ದಾನೆ.

❑ ಜಮ್‌ಷೆಡ್‌ಪುರ್ ಕೇಂದ್ರದ ಸಿಸ್ಟರ್ ನಿವೇದಿತಾ ಇಂಗ್ಲಿಷ್ ಸ್ಕೂಲ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಎಂ. ಸಾಯಿ, **EdnHeal Foundation** ಆಯೋಜಿಸಿದ್ದ ಮೂರನೆಯ ರಾಷ್ಟ್ರೀಯ ಮಟ್ಟದ IIT/PMT Olympiad (NIPO) ಸ್ಪರ್ಧೆಯಲ್ಲಿ ಎರಡನೆಯ ಸ್ಥಾನವನ್ನು ಗಳಿಸಿದ್ದಾನೆ. 2000 ರೂ.ಗಳ ನಗದು ಹಣ ಹಾಗು 5000 ರೂ.ಗಳ ಪುಸ್ತಕ ಇತ್ಯಾದಿ ಬಹುಮಾನಗಳನ್ನು ವಿದ್ಯಾರ್ಥಿ ಗಳಿಸಿದ್ದಾನೆ.

❑ ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯಲ್ಲಿರುವ ರಾಮಕೃಷ್ಣ ಮಿಷನ್ ವಿದ್ಯಾಮಂದಿರದ ವಿಜ್ಞಾನ ಪದವಿಯ ಪ್ರಥಮ ವರ್ಷದ ವಿದ್ಯಾರ್ಥಿ ಅರಿಂದಮ್ ಬಿಸ್ವಾಸ್, ಕಿಶೋರ್ ವೈಜ್ಞಾನಿಕ ಪ್ರೋತ್ಸಾಹನ್ ಯೋಜನಾ (KVPY) ವಿದ್ಯಾರ್ಥಿ ವೇತನವನ್ನು ಪಡೆದುಕೊಂಡಿದ್ದಾನೆ. ತಿಂಗಳಿಗೆ 4000 ರೂ. ನಗದನ್ನು ತನ್ಮೂಲಕ ಪಡೆಯುವವನಿದ್ದಾನೆ.

❑ ಮಹಾನ್ ಚಿಂತಕ ಹಾಗೂ ರಾಷ್ಟ್ರಕವಿ ಶ್ರೀ ಕುವೆಂಪುರವರ ಸ್ಫೂರ್ತಿಗೆ ಕಾರಣವಾಗಿದ್ದ ಸುಂದರ ತಾಣ ಮಲೆನಾಡಿನ ಚಿಕ್ಕಮಗಳೂರಿನಲ್ಲಿ ಸಮಾನಮನಸ್ಕರಾದ ಭಕ್ತರೆಲ್ಲರೂ ಕೂಡಿ ಒಂದು ಆಧ್ಯಾತ್ಮಿಕ ಕೇಂದ್ರವನ್ನು ಆರಂಭಿಸಲು ಪ್ರಯತ್ನಿಸಿದ ಫಲವಾಗಿ ೧೭. ೧೦. ೨೦೦೧ರಂದು 'ಶ್ರೀರಾಮಕೃಷ್ಣ ಶಾರದಾ ಸೇವಾ ಟ್ರಸ್ಟ್' ಎಂಬ ನೊಂದಾಯಿತ ಸಂಸ್ಥೆಯ ಆರಂಭೋತ್ಸವವಾಯಿತು. ಅದರಲ್ಲಿ ಚಿಕ್ಕಮಗಳೂರು ಹಾಗೂ ಸುತ್ತಮುತ್ತಲಿನ ಹಿರಿಯರು ಹಾಗೂ ಭಕ್ತರು ಕೂಡಿ ೧೪ ಮಂದಿ ಇದ್ದರು. ತದನಂತರ ಎಲ್ಲ ಆಧ್ಯಾತ್ಮಿಕ ಕಾರ್ಯಕ್ರಮಗಳು ಮತ್ತು ನಿತ್ಯ ಭಜನೆ ಕಾರ್ಯಕ್ರಮಗಳು ಬೆಂಗಳೂರು ಶ್ರೀಶಾರದಾ ಮಠದ ಅಧ್ಯಕ್ಷರಾದ ಪ್ರವ್ರಾಜಿಕಾ ಶುಭ್ರಪ್ರಾಣಾ ಮಾತಾಜಿಯವರ ದಿವ್ಯ ಮಾರ್ಗದರ್ಶನದಲ್ಲಿ ನಡೆಯುತ್ತಾ ಬಂದಿತು. ಈ ಸಂದರ್ಭದಲ್ಲಿ ಅನೇಕ ಸತ್ಸಂಗ ಕಾರ್ಯಕ್ರಮಗಳು

ಹಾಗೂ ಉಪನ್ಯಾಸ ಕಾರ್ಯಕ್ರಮಗಳು ಏರ್ಪಟ್ಟಿದ್ದವು.

ಈ ಸಂಸ್ಥೆ ತನ್ನದೇ ಆದ ಒಂದು ಕೇಂದ್ರವನ್ನು ಸ್ಥಾಪಿಸಲು ಬಹಳ ಪ್ರಯತ್ನ ನಡೆಸಿತ್ತೇ ಆದರೂ ಅದು ಫಲಕೊಡಲು ಕೆಲವು ವರ್ಷಗಳೇ ಬೇಕಾಯಿತು. ಕರ್ನಾಟಕ ಸರ್ಕಾರದ ಸಹಕಾರದೊಂದಿಗೆ ಹಾಗೂ ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀಎಸ್.ಎಂ.ಕೃಷ್ಣ ಅವರ ಸಹಕಾರದೊಂದಿಗೆ ೨೧.೧೧.೨೦೦೩ರಂದು ಇದಕ್ಕೆ ಒಂದು ಸ್ಥಳ ದೊರೆಯಿತು. ಈಗ ಈ ಸುಂದರ ತಾಣದಲ್ಲಿ ಆಧ್ಯಾತ್ಮಿಕ ಕೇಂದ್ರವೊಂದು ತಲೆಯೆತ್ತಿ ನಿಂತಿರುವುದು ಮಲೆನಾಡಿನ ಭವ್ಯ ಪರಂಪರೆಯ ಹಿರಿಮೆಯನ್ನು ಹೆಚ್ಚಿಸಿದೆ. ಈ ಕೇಂದ್ರದ ವಿಧ್ಯುಕ್ತ ಉದ್ಘಾಟನೆ ಮಾರ್ಚ್ ತಿಂಗಳ ಮೊದಲನೇ ವಾರದಲ್ಲಿ ನಡೆಯಿತು.

ದಿನಾಂಕ ೮.೩.೨೦೦೭ರಂದು ಸಾಯಂಕಾಲ ಶಾಸ್ತ್ರೋಕ್ತವಾದ ಪೂಜಾವಿಧಿಗಳು, ವಾಸ್ತುಸಂಬಂಧಿ ಪೂಜೆಗಳು ಪ್ರಾರಂಭವಾದವು. ಚಿಕ್ಕಮಗಳೂರು ಹಾಗೂ ಸುತ್ತಮುತ್ತಲಿನ ಭಕ್ತರು ಅತ್ಯಂತ ಶ್ರದ್ಧಾಭಕ್ತಿಯಿಂದ ಆಗಮಿಸಿ ಮಹಾಮಾತೆಯ ಸುಂದರ ಮಂದಿರದ ಉದ್ಘಾಟನೆಗೆ ನಾಂದಿ ಹಾಡಿದರು. ದಿನಾಂಕ ೯.೩.೨೦೦೭ರಂದು ಶುಕ್ರವಾರ ಮಧ್ಯಾಹ್ನ 3 ಘಂಟೆಗೆ ಮಹಾರಾಷ್ಟ್ರದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಎಸ್. ಎಂ. ಕೃಷ್ಣ ಅವರು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮಕ್ಕೆ ಆಗಮಿಸಿ ಮಹಾಮಾತೆ ಶಾರದಾದೇವಿಯವರ ಭಾವಚಿತ್ರಕ್ಕೆ ಭಕ್ತಿ ಪುಷ್ಪಾಂಜಲಿಯನ್ನು ಸಮರ್ಪಿಸಿದರು. ಅನಂತರ ಮಂದಿರದ ಉದ್ಘಾಟನೆಯ ಫಲಕವನ್ನು ಮಾನ್ಯ ರಾಜ್ಯಪಾಲರು ಅನಾವರಣ ಮಾಡಿದರು. ಮಾನ್ಯ ರಾಜ್ಯಪಾಲರಾದ ಶ್ರೀ ಎಸ್. ಎಂ. ಕೃಷ್ಣ ಅವರೊಂದಿಗೆ ಶ್ರೀಮತಿ ಪ್ರೇಮಾ ಕೃಷ್ಣ, ಸಚಿವ ಶ್ರೀ ಡಿ. ಎಚ್. ಶಂಕರಮೂರ್ತಿ, ಸಂಸದ ಶ್ರೀ ಡಿ.ಸಿ. ಶ್ರೀಕಂಠಪ್ಪ, ಶಾಸಕ ಶ್ರೀ ಸಿ.ಟಿ. ರವಿ, ನ್ಯಾಯಮೂರ್ತಿ ಎನ್.ಡಿ. ವೆಂಕಟೇಶ್‌ರವರು ಹಾಗೂ ಮಾಜಿ ಸಂಸದರಾದ ಶ್ರೀ ಬಿ.ಎಲ್. ಶಂಕರ್, ಮುಖ್ಯವೇದಿಕೆಗೆ ಆಗಮಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಪರಮ ಪೂಜನೀಯ ಪ್ರವ್ರಾಜಿಕಾ ಶುಭ್ರಪ್ರಾಣಾ ಮಾತಾಜಿ, ಅಧ್ಯಕ್ಷರು, ಶಾರದಾ ಮಠ, ಬೆಂಗಳೂರು ಹಾಗೂ ಪರಮ ಪೂಜನೀಯ ಪ್ರವ್ರಾಜಿಕಾ ಅಮಲಪ್ರಾಣಾ ಮಾತಾಜಿ, ಕಾರ್ಯದರ್ಶಿಗಳು, ಶ್ರೀಶಾರದಾ ಮಠ, ದಕ್ಷಿಣೇಶ್ವರ, ಕೊಲ್ಕತಾ, ಇವರುಗಳು ಪ್ರಾಸ್ತಾವಿಕ ಉಪನ್ಯಾಸಕರಾಗಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಾಸ್ತಾವಿಕ ಭಾಷಣವನ್ನು ತಮ್ಮ ಸುಂದರ ಶೈಲಿಯಲ್ಲಿ ಎಲ್ಲರ ಮನಮುಟ್ಟುವಂತೆ ಮಾಡಿದ ಪರಮ ಪೂಜ್ಯ ಅಮಲಪ್ರಾಣಾ ಮಾತಾಜಿಯವರು ಈ ಕೇಂದ್ರವು ಮುಂದೆ ಅತ್ಯಂತ ಗಹನವಾದ ಹಾಗೂ ಕ್ರಿಯಾಶೀಲವಾದ ಕೇಂದ್ರವಾಗಬೇಕಾದರೆ ಎಲ್ಲರ ಸಹಕಾರ ಹಾಗೂ ಪ್ರೋತ್ಸಾಹ ಬೇಕಾಗುತ್ತದೆ ಎಂದು ವಿವರಿಸಿದರು. ತ್ಯಾಗ ಮತ್ತು ಸೇವೆಯ ಆದರ್ಶಗಳನ್ನು ಹೊಂದಿದ ಯುವಪೀಳಿಗೆ ನಮಗಿಂದು ಬೇಕಾಗಿದೆ. ಅಂಥವರಿಂದ ಇಂತಹ ಕೇಂದ್ರದ ಅಭಿವೃದ್ಧಿಯು ಸಾಧ್ಯವಾಗುತ್ತದೆ ಎಂದು ವಿವರಿಸಿದರು. ಈ ಕೇಂದ್ರವನ್ನು ಸ್ಥಾಪಿಸಿ ಅಭಿವೃದ್ಧಿಪಡಿಸಲು ಶ್ರಮಿಸುತ್ತಿರುವ ಶ್ರೀರಾಮಕೃಷ್ಣ ಶಾರದಾ ಸೇವಾಶ್ರಮದ ಅಧ್ಯಕ್ಷರಾದ ಶ್ರೀಮತಿ ವಾಸಂತಿ ಗಂಗಯ್ಯ ಹೆಗ್ಗಡೆಯವರು ಹಾಗೂ ಅವರ ತಂಡದ ಶ್ರಮವನ್ನು ಶ್ಲಾಘಿಸಿದರು.

ನ್ಯಾಯಮೂರ್ತಿ ಶ್ರೀ ಎನ್.ಡಿ. ವೆಂಕಟೇಶ್ ಅವರು ರಾಮಕೃಷ್ಣ ಪರಂಪರೆಯ ಬಗ್ಗೆ ವಿವರಿಸಿ ಚಿಕ್ಕಮಗಳೂರಿನಲ್ಲಿ ಸುಂದರವಾದ ಮಂದಿರದ ಸ್ಥಾಪನೆಯಾಗಿರುವುದು ಇಡೀ ಮಲೆನಾಡಿಗೆ ಒಂದು ಕಲಶಪ್ರಾಯವಾದ ಘಟನೆಯಾಗಿದೆ ಎಂದು ಬಣ್ಣಿಸಿದರು. ಮಹಾರಾಷ್ಟ್ರದ ರಾಜ್ಯಪಾಲರಾದ ಶ್ರೀ ಎಸ್. ಎಂ. ಕೃಷ್ಣ ಅವರು ತಮ್ಮ ಹಾಗೂ ಶ್ರೀರಾಮಕೃಷ್ಣ ಆಶ್ರಮದ ನಡುವಣ ಬಾಂಧವ್ಯವನ್ನು ಅತ್ಯಂತ ಮನೋಜ್ಞವಾಗಿ ವಿವರಿಸಿದರು. ಈ ತಿಂಗಳಿನಲ್ಲಿ ಇದು ತಮ್ಮ ಎರಡನೆಯ ಆಧ್ಯಾತ್ಮಿಕ ಕೇಂದ್ರದ ಕಾರ್ಯಕ್ರಮ ಎಂದು ಬಣ್ಣಿಸಿ ತಮ್ಮ ಇತ್ತೀಚಿನ ನಾಗಪುರ ಶ್ರೀರಾಮಕೃಷ್ಣ ಆಶ್ರಮದ ಭೇಟಿ ಹಾಗೂ ಅನುಭವಗಳನ್ನು ಹಂಚಿಕೊಂಡರು. ಶ್ರೀಮತಿ ವಾಸಂತಿ ಹೆಗ್ಗಡೆಯವರು ತಮ್ಮ ಸ್ನೇಹಿತರ ಸಹಕಾರದೊಂದಿಗೆ ಇಂಥ ಅತ್ಯಂತ ಸುಂದರವಾದ ಶ್ರೀಶಾರದಾಮಾತೆಯ ಮಂದಿರವನ್ನು ಮಲೆನಾಡಿಗೆ ಸಮರ್ಪಿಸಿರುವುದು ಮಲೆನಾಡಿಗೆ ಹೆಮ್ಮೆಯ ವಿಚಾರ ಎಂದು ತಿಳಿಸಿದರಲ್ಲದೆ ಮುಂದೆ ಇದು ಅತ್ಯಂತ ಪ್ರಸಿದ್ಧವಾದ ಆಧ್ಯಾತ್ಮಿಕ ಕೇಂದ್ರವಾಗುವುದರಲ್ಲಿ ಸಂದೇಹವಿಲ್ಲ ಎಂದು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪರಮ ಪೂಜ್ಯ ಪ್ರವ್ರಾಜಿಕಾ ಶುಭ್ರಪ್ರಾಣಾ ಮಾತಾಜಿಯವರು ಚಿಕ್ಕಮಗಳೂರು ಶಾರದಾಮಂದಿರವು ಮುಂದೆ ಭವ್ಯ ಕೇಂದ್ರವಾಗಿ ಶ್ರೀರಾಮಕೃಷ್ಣ ಪರಮಹಂಸರ, ಮಹಾಮಾತೆ ಶ್ರೀಶಾರದಾದೇವಿಯವರ ಹಾಗೂ ಸ್ವಾಮಿ ವಿವೇಕಾನಂದರ ಅತ್ಯಮೂಲ್ಯ ವಿಚಾರಧಾರೆಯನ್ನು ಈ ಭಾಗದ ಜನತೆಗೆ ಪರಿಚಯಿಸಿ, ಎಲ್ಲ ರೀತಿಯ ಕಾರ್ಯಕ್ರಮಗಳನ್ನು ನಡೆಸುವಂತಾಗಲಿ ಎಂದು ಆಶೀರ್ವದಿಸಿದರು.

ಸುಮಾರು ೧೫೦೦ಕ್ಕೂ ಮಿಗಿಲಾಗಿ ನೆರೆದಿದ್ದ ಜನಸ್ತೋಮ ಈ ಕಾರ್ಯಕ್ರಮವನ್ನು ನಡೆಸಿಕೊಟ್ಟ ಖ್ಯಾತ ಅಂಕಣಕಾರ ಶ್ರೀ ಚಕ್ರವರ್ತಿ ಸೂಲಿಬೆಲೆ ಅವರ ವಾಗ್ವೈಖರಿಗೆ ಮಾರು ಹೋಯಿತು. ಈ ಸಂದರ್ಭದಲ್ಲಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದವರ ಸಹಕಾರದೊಂದಿಗೆ ಪುಸ್ತಕ ಪ್ರದರ್ಶನ ಹಾಗೂ ಮಾರಾಟಕೇಂದ್ರವನ್ನು ತೆರೆಯಲಾಗಿತ್ತು. ಸುಮಾರು ೧೨.೦೦೦ ರೂ.ಗಳಷ್ಟು ಮೌಲ್ಯದ ಧಾರ್ಮಿಕ ಪುಸ್ತಕಗಳು ಮಾರಾಟವಾದವು.

ನಿಜವಾದ ಭರತಖಂಡದ ಚರಿತ್ರೆ ಬೆಳಕಿಗೆ ಬಂದಾಗ ಗೊತ್ತಾಗುವುದು ಧಾರ್ಮಿಕ ವಿಷಯಗಳಲ್ಲಿ ಮಾತ್ರವಲ್ಲ, ಲಲಿತ ಕಲೆಗಳಲ್ಲಿ ಕೂಡ ಭರತಖಂಡವು ಇಡೀ ಪ್ರಪಂಚಕ್ಕೆ ಆದಿಗುರು ಎಂಬುದು.

—ಸ್ವಾಮಿ ವಿವೇಕಾನಂದ